ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ಮಾನ್ಯ ಅಧ್ಯಕ್ಷರೇ, ಸಪ್ಲಿಮೆಂಟರಿ ಪ್ರಶ್ನೆಯಲ್ಲಿ 1981ರಲ್ಲಿ ಈ ಕರ್ನಾಟಕ ಕೈ ಮಗ್ಗ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಿದ್ದೀರಿ. ಆಲ್ಲಿಂದ 1996ರವರೆಗೂ ತಾವು ಎಷ್ಟು ಕುಟುಂಬಗಳಿಗೆ ಇದರ ಪ್ರತಿಫಲವನ್ನು ಕೊಟ್ಟಿದ್ದೀರಿ. ಎರಡನೆಯದಾಗಿ ಕೆರೂರು ಗ್ರಾಮದಲ್ಲಿ ನೇಕಾರಿಕೆಯನ್ನೇ ಅವಲಂಬಿಸಿರತಕ್ಕಂಥ ಎಷ್ಟು ಕುಟುಂಬಗಳು ಇವೆ? ಇನ್ನು ಮೂರನೇದಾಗಿ 1992-93 ರಲ್ಲಿ ತಾವು ನೇಕಾರರಿಗೆ ವಿತರಿಸಿದ ನೂಲಿನ ವಿವರ ಇಲ್ಲ ಆನಂತರ ನೇಕಾರರಿಗೆ ವಿತರಿಸಿದ ಪರಿವರ್ತನೆ ಹಣ ಎಷ್ಟು? ಈಗ ಏನು ತಾವು 5 ಯೋಜನೆಗಳನ್ನು ಮಾಡಿದ್ದೀರಿ, ಆ ಯೋಜನೆಗಳಲ್ಲಿ 1992-93ರಲ್ಲಿ ಕೊಟ್ಟಿರತಕ್ಕಂಥ ಅಂಶ ಕೂಡ ಇದರಲ್ಲಿ ಇಲ್ಲ. ಸುಮಾರು 3217 ಕೆ.ಜಿ. ಕೊಟ್ಟಿದ್ದೀರಿ. ಆ ವ್ಯತ್ಯಾಸ ಇವತ್ತು 1995-96ರಲ್ಲಿ ಕೂಡ ಇಲ್ಲ. ಸರ್ಕಾರದಿಂದ ಕೊಡುವಂತಹ ಸವಲತ್ತು ಆ ಬಡವರಿಗೆ ಕೊಡುವುದರಲ್ಲಿ ನಿರ್ಲಕ್ಷ್ಯ ವಹಿಸಿದೆ ಎನ್ನುವುದನ್ನು ತಾವು ಒಪ್ಪಿಕೊಳ್ಳುತ್ತೀರಿ ಎಂದು ಕಾಣುತ್ತದೆ. ಈ ವರ್ಷ ತಾವು ಈ ಬಗ್ಗೆ ಏನು ಕ್ರಮ ಕೈಗೊಳ್ಳುತ್ತೀರಿ?

ಶ್ರೀ ಎಂ.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಪ್ರಗತಿಯಲ್ಲಿ ಸ್ವಲ್ಪ ಕುಂಠಿತವಾಗಿರತಕ್ಕಂಥದ್ದು ನಿಜ. 1995-96ನೇ ಇಸವಿಯಲ್ಲಿ ಕಡಿಮೆ ಆಗಿದೆ. ಕಡಿಮೆ ಆಗಲು ಒಂದು ಕಾರಣ ಕೆರೂರಿನಲ್ಲಿರತಕ್ಕಂಥ ನೇಕಾರರು ಇಳಕಲ್ಲು ಸೀರೆಯನ್ನು ನೇಯತಕ್ಕಂಥ ಒಂದು ವ್ಯವಸ್ಥೆಯಲ್ಲಿದ್ದಾರೆ. ಅವರು ನಮ್ಮವರಿಗಿಂತ ಹೊರಗಡೆಯಿಂದ ಬಂದವರು ಸಾಕಷ್ಟು ಜನ ಇದ್ದಾರೆ, ಅದೂ ಒಂದು ಕಾರಣ. ಈ ವರ್ಷದಲ್ಲಿ ನಾವು ಅವರಿಗೆ ಹೆಚ್ಚಿನ ಅನುಕೂಲ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ. 1981ರಲ್ಲಿ ಇದನ್ನು ಆಳವಡಿಸಿಕೊಳ್ಳಲಾಗಿದೆ. ಮಾನ್ಯ ಸದಸ್ಯರು ಅವತ್ತಿನಿಂದ ಏನಾಗಿದೆ ಎನ್ನತಕ್ಕಂಥ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಅವರು 1992-93, 93-94, 94-95ನೇ ಇಸವಿಯ ಮಾಹಿತಿಯನ್ನು ಕೇಳಿರುವುದರಿಂದ ಒದಗಿಸಿದ್ದೇನೆ. ಈ ಹಿಂದಿನ ಮಾಹಿತಿಯನ್ನು ಬೇಕಾದರೆ ನಾನು ಒದಗಿಸಿಕೊಡುತ್ತೇನೆ. ಈಗಾಗಲೇ ನಮ್ಮ ಕೇಂದ್ರ ಸರ್ಕಾರದ ಯೋಜನೆಯಲ್ಲಿ 24 ಮನೆಗಳನ್ನು ಕಟ್ಟಿಸಿಕೊಡುವ ಕಾರ್ಯ ತೆಗೆದುಕೊಂಡಿದ್ದೇವೆ. 4 ಜನ ನೇಕಾರರಿಗೆ ಈ ವರ್ಷ ನಾವು ಕಾರ್ಯಾಗಾರಗಳನ್ನು ಮಾಡಲು ವ್ಯವಸ್ಥೆಯನ್ನು ಮಾಡುತ್ತಿದ್ದೇವೆ.

ವಿಷಯ:- ಹೊಸದುರ್ಗ ಪಟ್ಟಣದಲ್ಲಿ ಸಣ್ಣ ಕೈಗಾರಿಕಾ ಶೆಡ್ಡುಗಳ ನಿರ್ಮಾಣ

278 (1820) ಶ್ರೀ ಟಿ.ಎಚ್. ಬಸವರಾಜ್ (ಹೊಸದುರ್ಗ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊಸದುರ್ಗ ಪಟ್ಟಣದಲ್ಲಿ ನಿರ್ಮಿಸಿರುವ ಕೈಗಾರಿಕಾ ಶೆಡ್ಡುಗಳ ವಿತರಣೆ ಯಾವ ದಿನಾಂಕದಿಂದ ಆರಂಭವಾಗಿದೆ?

ಆ) ಈ ಕೈಗಾರಿಕಾ ಶೆಡ್ಡುಗಳ ಮತ್ತು ಪ್ರದೇಶದ ವಿಸ್ತೀರ್ಣವೆಷ್ಟು?

ಇ) ಖಾಲಿ ಪ್ರದೇಶವನ್ನು ಯಾರಿಗಾದರೂ ಗುತ್ತಿಗೆ ಆಧಾರದ ಮೇಲೆ ಕೊಡಲಾಗಿದೆಯೇ ಹಾಗಿದ್ದಲ್ಲಿ ಯಾವ ಉದ್ದೇಶಕ್ಕಾಗಿ ಕೊಡಲಾಗಿದೆ?

ಈ) ಹಾಲಿ ಕಟ್ಟಿರುವ ಶೆಡ್ಡುಗಳ ವೆಚ್ಚವೆಷ್ಟು?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) 1992ನೇ ಇಸವಿಯಿಂದ.

ಆ) ಈ ಕೈಗಾರಿಕಾ ವಸಾಹತುವಿನಲ್ಲಿ 8-ಸಿ ಮತ್ತು 8-ಡಿ ಮಾದರಿಯ ಶೆಡ್ಡುಗಳನ್ನು ಮತ್ತು ಕ್ಯೂ, ಆರ್ ಮತ್ತು ಎಸ್ ಮಾದರಿಯ ಒಟ್ಟು 37 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಶೆಡ್ಡುಗಳ ವಿಸ್ತೀರ್ಣ:

1)	ಸಿ ಮಾದರಿಯ ಪ್ರತಿ ಶೆಡ್ಡಿನ ವಿಸ್ತೀರ್ಣ	:	1500 ಚ.ಅ.
2)	ಡಿ ಮಾದರಿಯ ಪ್ರತಿ ಶೆಡ್ಡಿನ ವಿಸ್ತೀರ್ಣ	:	750 ಚ.ಅ.

ನಿವೇಶನಗಳ ವಿಸ್ತೀರ್ಣ:

1)	ಕ್ಯೂ ಮಾದರಿಯ 5 ನಿವೇಶನಗಳು. ಪ್ರತಿ ನಿವೇಶನಗಳ ವಿಸ್ತೀರ್ಣ	:	5875 ಚ.ಅ.
2)	ಆರ್ ಮಾದರಿಯ 12 ನಿವೇಶನಗಳು. ಪ್ರತಿ ನಿವೇಶನಗಳ ವಿಸ್ತೀರ್ಣ	:	4065 ಚ.ಅ.
3)	ಎಸ್ ಮಾದರಿಯ 20 ನಿವೇಶನಗಳು. ಪ್ರತಿ ನಿವೇಶನಗಳ ವಿಸ್ತೀರ್ಣ	:	2615 ಚ.ಅ.
	ಒಟ್ಟು ಪ್ರದೇಶದ ವಿಸ್ತೀರ್ಣ	:	9.9 ಎಕರೆ

ಇ) ಕ್ಯೂ ಮಾದರಿಯ ನಿವೇಶನ ಒಂದನ್ನು ಹಂಚಿಕೆ ಮಾಡಿಲಾಗಿದೆ. ಈ ನಿವೇಶನವನ್ನು ಸಿಮೆಂಟ್ ಪೈಪ್ ತಯಾರಿಸುವ ಉದ್ದೇಶಕ್ಕೆ ಹಂಚಿಕೆ ಮಾಡಲಾಗಿದೆ.

ಈ) ರೂ. 20.62 ಲಕ್ಷ.

ಶ್ರೀ ಟಿ.ಎಚ್. ಬಸವರಾಜ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರ ಉತ್ತರ ಬಹಳಷ್ಟು ಮಾರ್ಮಿಕವಾಗಿದೆ. ಅಲ್ಲಿ ಶೆಡ್ಡುಗಳು ಖಾಲಿ ಇದ್ದರೂ ಕೂಡ ಖಾಲಿ ನಿವೇಶನಗಳನ್ನು ಗುತ್ತಿಗೆಗೆ ಕೊಟ್ಟಿದ್ದೇವೆಂದು ಹೇಳುತ್ತಾರೆ. ಅಲ್ಲಿ ನಿವೇಶನಗಳು ಬಹಳಷ್ಟು ಬೆಲೆ ಬಾಳುತ್ತವೆ. ಇಲ್ಲಿ ಯಾರಿಗೆ ನಿವೇಶನಗಳನ್ನು ಕೊಟ್ಟಿದ್ದಾರೆ, ಅವರ ಹೆಸರು ಇಲ್ಲ. ಯಾವ ಆಧಾರದ ಮೇಲೆ ಕೊಟ್ಟಿದ್ದಾರೆ ಎನ್ನುವುದಕ್ಕೆ ವಿವರ ಕೊಟ್ಟಿಲ್ಲ. ಯಾರಿಗೆ ಕೊಟ್ಟಿದ್ದಾರೆ ಎಂಬ ಬಗ್ಗೆ ಅವರ ಹೆಸರುಗಳನ್ನು ತಿಳಿಸ-ಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಯ್ದೀನ್:- ಮಾನ್ಯ ಅಧ್ಯಕ್ಷರೇ, ಶೆಡ್ಡುಗಳ ವಿವರ ಈಗಾಗಲೇ ನಾನು ಒದಗಿಸಿದ್ದೇನೆ. ಮತ್ತೇ ಈ 37 ನಿವೇಶನಗಳು ಏನು ಇದೆ ಅದರಲ್ಲಿ ಒಂದನ್ನು ಮಾತ್ರ ನಾವು ಇಲ್ಲಿಯವರೆಗೂ ಕೊಟ್ಟಿದ್ದೇವೆ. ಬಾಕಿ ಇರತಕ್ಕಂಥ ನಿವೇಶನ ಯಾವುದೂ ಕೊಟ್ಟಿಲ್ಲ.

ಶ್ರೀ ಟಿ.ಎಚ್. ಬಸವರಾಜು:- ಯಾರಿಗೆ ಕೊಟ್ಟಿದ್ದೀರಿ, ಅವರ ಹೆಸರು ಹೇಳಿ.

ಶ್ರೀ ಬಿ.ಎ. ಮೊಯ್ದೀನ್:- ಒಂದು ಶೆಡ್ಡನ್ನು ಕೈಗಾರಿಕಾ ಚಟುವಟಿಕೆಗೆ ಕೊಟ್ಟಿದ್ದೇವೆ. ಸಿಮೆಂಟ್ ಪೈಪ್ ಮಾಡುವುದಕ್ಕೆ ಕೊಟ್ಟಿದ್ದೇವೆ. ಅವರ ಹೆಸರು ನನಗೆ ಗೊತ್ತಿಲ್ಲ.

ವಿಷಯ:- ಹಳೆಯಂಗಡಿ, ಪಡುಪಣಂಬೂರ್ ಹಾಗೂ ಕಿಲ್ಪಾಡಿ ಪಂಚಾಯಿತಿಗಳಿಗೆ ನೀರು ಪೂರೈಕೆ.

279 (2132) ಶ್ರೀ ಕೆ. ಅಮರನಾಥ ಶೆಟ್ಟಿ (ಮೂಡಬಿದರೆ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೂಲ್ಕಿಯ ಜೊತೆ ಹಳಿಯಂಗಡಿ ಪಡುಪಣಂಬೂರ್, ಕಿಲ್ಪಾಡಿ ಈ ಮೂರು ಪಂಚಾಯಿತಿಗಳೂ ಮಂಗಳೂರು ನಗರ ಕಾರ್ಪೋರೇಷನ್ನಿಗೆ ಸೇರಿಸುವುದರಿಂದ ತುಂಬೆ ನೀರು ಸರಬರಾಜು ಯೋಜನೆಯಲ್ಲಿ ಸದರಿ ಗ್ರಾಮಗಳಿಗೂ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆ?

ಆ) ಈ ಯೋಜನೆಗೆ ಪ್ಲಾನ್ ಮತ್ತು ಎಸ್ಟಿಮೇಟ್ ಆಗಿದೆಯೇ? ಆಗಿದ್ದರೆ ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡಲಾಗುವುದು ಮತ್ತು ಅಲ್ಲಿಯ ಜನರಿಗೆ ಈ ನೀರಿನ ಬವಣೆಯನ್ನು ಹೋಗಲಾಡಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಈ ಬಗ್ಗೆ ಒಂದು ಸಮಗ್ರ ಯೋಜನೆಯನ್ನು ರೂಪಿಸಬೇಕಾಗಿದೆ. ನಂತರ ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಆ) ಇಲ್ಲ, ಸರ್ಕಾರವು ಮುಲ್ಕಿಯ ಜೊತೆ ಹಳಿಯಂಗಡಿ, ಪಡುಪಣಂಬೂರ್ ಮತ್ತು ಕಿಲ್ಪಾಡಿ ಪಂಚಾಯಿತಿಗಳನ್ನು ತನ್ನ ಆದೇಶ ಸಂಖ್ಯೆ: ವನ್ಇ 260 ಎಂಎಲ್ಆರ್ ದಿನಾಂಕ: 16-10-1995 ರಲ್ಲಿ ಸೇರಿಸಲ್ಪಟ್ಟಿದೆ. ಈ ಎಲ್ಲಾ ಪ್ರದೇಶಗಳನ್ನು ಸೇರಿಸಿ, ಒಂದು ಸಮಗ್ರ ನೀರು ಸರಬರಾಜು ಯೋಜನೆಯನ್ನು ತಯಾರಿಸಲು, ಈಗಾಗಲೇ ಮಂಗಳೂರು ಮಹಾನಗರ ಪಾಲಿಕೆಯವರು ಮೆ: ಟಾಟಾ ಕನ್ಸಲ್ಟೆಂಟ್ ಜೊತೆ ಒಪ್ಪಂದ ಮಾಡುವ ಹಂತದಲ್ಲಿದೆ. ಈ ಮಧ್ಯೆ ಈ ಪ್ರದೇಶಗಳಿಗೆ ತುಂಬೆಯಿಂದ ನೀರು ಸರಬರಾಜು ಮಾಡಲು ಸರ್ವೆ ಕೆಲಸ ಮುಗಿಸಿ ಪ್ಲಾನ್ ಮತ್ತು ಅಂದಾಜನ್ನು ಮಾಡುವ ಕೆಲಸವನ್ನು ಮುಗಿಸುವ ಹಂತದಲ್ಲಿದೆ. ಶೀಘ್ರದಲ್ಲಿ ಮಹಾನಗರ ಪಾಲಿಕೆಗೆ ಅಂದಾಜು ಪಟ್ಟಿಗಳಿಗೆ ಮೇಲುರುಜು ಮಾಡಲು ಮತ್ತು ಹಣಕಾಸಿನ ವ್ಯವಸ್ಥೆ ಮಾಡಲು ಕಳುಹಿಸಲಾಗುವುದು.